# ಮೈಸೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಸೌಧ
ಕ್ರಾಫರ್ಡ್ ಭವನ, ಮೈಸೂರು

ಸಂಖ್ಯೆ: ಯುಎ-3/190/2018-19

ದಿನಾಂಕ 04-10-2018

ಶಿಕ್ಷಣ ಮಂಡಳಿ ಸದಸ್ಯರುಗಳಿಗೆ,

ಮಾನ್ಯರೆ,

ವಿಷಯ: ದಿನಾಂಕ: 15-09-2018ರಂದು ನಡೆದ ಶಿಕ್ಷಣ ಮಂಡಳಿ ಮೊದಲನೇ ಸಾಮಾನ್ಯ ಸಭೆಯ ನಡಾವಳಿಯನ್ನು ಕಳುಹಿಸುವ ಬಗ್ಗೆ.

* * * * *

ದಿನಾಂಕ 15-09-2018ರಂದು ಬೆಳಗ್ಗೆ 11-00 ಗಂಟೆಗೆ, ಕ್ರಾಫರ್ಡ್ ಭವನದ ಶಿಕ್ಷಣ ಮಂಡಳಿ ಸಭಾಂಗಣದಲ್ಲಿ ನಡೆದ, ಶಿಕ್ಷಣ ಮಂಡಳಿಯ ಮೊದಲನೇ ಸಾಮಾನ್ಯ ಸಭೆಯ ನಡಾವಳಿಗಳ ಪ್ರತಿಯನ್ನು ತಮ್ಮ ಮಾಹಿತಿಗಾಗಿ ಈ ಮೂಲಕ ಕಳುಹಿಸಿಕೊಡಲಾಗಿದೆ, ನಡಾವಳಿಯಲ್ಲಿ ಹೇಳಿರುವ ಯಾವುದೇ ಆಂಶದ ಯಥಾರ್ಥತೆಯ ಬಗ್ಗೆ ಸಭೆಯಲ್ಲಿ ಹಾಜರಿದ್ದ ಸದಸ್ಯರುಗಳಿಂದ ನಡಾವಳಿಗಳನ್ನು ಕಳುಹಿಸಿದ ದಿನಾಂಕದಿಂದ 21 ದಿನಗಳ ಓಳಗಾಗಿ ಆಕ್ಷೇಪಣೆ ಬಾರದಿದ್ದಲ್ಲಿ, ನಡಾವಳಿಯಲ್ಲಿ ಹೇಳಿರುವ ಎಲ್ಲಾ ಅಂಶಗಳು ಸರಿಯಾಗಿವೆ ಎಂದು ಪರಿಗಣಿಸಲ್ಪಡುತ್ತವೆ, ಆದುದರಿಂದ, ನಡಾವಳಿಯ ಬಗ್ಗೆ ನಿಮ್ಮ ಆಕ್ಷೇಪಣೆ(ಗಳು) ಏನಾದರೂ ಇದ್ದಲ್ಲಿ, ಈ ಬಗ್ಗೆ "ಕುಲಸಚಿವರು, ಮೈಸೂರು ವಿಶ್ವವಿದ್ಯಾನಿಲಯ, ಕ್ರಾಫರ್ಡ್‌ಭವನ, ಮೈಸೂರು" ಇವರನ್ನು ಉದ್ದೇಶಿಸಿ ಬರೆದ ಪತ್ರವನ್ನು ದಿನಾಂಕ 24-10-2018ರ ಓಳಗಾಗಿ, ವಿಶೇಷಾಧಿಕಾರಿಗಳು, ಸಿಂಡಿಕೇಟ್ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಕ್ರಾಫರ್ಡ್‌ಭವನ, ಮೈಸೂರು-570 005 ಇವರಿಗೆ ನೇರವಾಗಿ ತಲುಪಿಸುವಂತೆ ಕೋರಲಾಗಿದೆ.

ತಮ್ಮ ನಂಬುಗೆಯ

4/10/18

ವಿಶೇಷಾಧಿಕಾರಿ(ಪ್ರಾಧಿಕಾರ)

ಪ್ರತಿ:

1. ಘನತೆವೆತ್ತ ರಾಜ್ಯಪಾಲರ ಕಾರ್ಯದರ್ಶಿಗಳು, ರಾಜಭವನ, ಬೆಂಗಳೂರು – ಘನತೆವೆತ್ತ ರಾಜ್ಯಪಾಲರ ಅವಗಹಾನೆಗೆ ತರಬೇಕಾಗಿ ಕೋರಲಾಗಿದೆ.
2. ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ(ವಿಶ್ವವಿದ್ಯಾನಿಲಯ), ಬಹುಮಹಡಿಗಳ ಕಟ್ಟಡ, ಬೆಂಗಳೂರು.
3. ಕುಲಸಚಿವರು(ಪರೀಕ್ಷಾಂಗ)/ಹಣಕಾಸು ಅಧಿಕಾರಿಗಳು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
4. ನಿರ್ದೇಶಕರು, ಪಿ.ಎಂ.ಇ.ಬಿ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
5. ನಿರ್ದೇಶಕರು, ಕಾಲೇಜು ಅಭಿವೃದ್ಧಿ ಮಂಡಳಿ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
6. ನಿರ್ದೇಶಕರು, ವಿದ್ಯಾರ್ಥಿಕ್ಷೇಮಪಾಲನ ನಿರ್ದೇಶನಾಲಯ, ಮಾನಸಗಂಗೋತ್ರಿ, ಮೈಸೂರು.
7. ಎಲ್ಲ ಉಪಕುಲಸಚಿವರು/ಸಹಾಯಕ ಕುಲಸಚಿವರು(ಶೈಕ್ಷಣಿಕ/ಆಡಳಿತ/ಅಭಿವೃದ್ಧಿ/ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ವರ್ಗಗಳ ವಿಶೇಷ ಘಟಕ), ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
8. ಕುಲಪತಿ/ಕುಲಸಚಿವ/ಕುಲಸಚಿವ(ಪರೀಕ್ಷಾಂಗ)/ಹಣಕಾಸು ಅಧಿಕಾರಿಗಳ ಆಪ್ತ ಸಹಾಯಕರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
9. ಕಛೇರಿ ಪ್ರತಿ.

AC Forwarding letter

# ಮೈಸೂರು ವಿಶ್ವವಿದ್ಯಾನಿಲಯ

ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್‌ಭವನದ ಶಿಕ್ಷಣ ಮಂಡಳಿ ಸಭಾಂಗಣದಲ್ಲಿ ದಿನಾಂಕ: 15-09-2018 ರಂದು ಪೂರ್ವಾಹ್ನ 11-00 ಗಂಟೆಗೆ ನಡೆದ ಶಿಕ್ಷಣ ಮಂಡಳಿಯ ಮೊದಲನೇ ಸಾಮಾನ್ಯ ಸಭೆಯ ನಡಾವಳಿಗಳು.

<u>ಸಭೆಗೆ ಹಾಜರಾದ ಸದಸ್ಯರುಗಳು</u>

| | |
|---|---|
| 1. ಪ್ರೊ.ಟಿ.ಕೆ.ಉಮೇಶ್, ಕುಲಪತಿಗಳು (ಪ್ರ) | ... ಅಧ್ಯಕ್ಷರು |
| 2. ಶ್ರೀ.ಅಪ್ಪಾಜಿಗೌಡ, ವಿಧಾನ ಪರಿಷತ್ ಸದಸ್ಯರು | ... ಸದಸ್ಯರು |
| 3. ಡಾ.ಎಂ.ಸಿ.ನಟರಾಜ | ... ಸದಸ್ಯರು |
| 4. ಶ್ರೀ.ಜಿ.ಅಶ್ವತ್ಥ್ ನಾರಾಯಣ | ... ಸದಸ್ಯರು |
| 5. ಶ್ರೀ.ಪುಷ್ಪಕುಮಾರ್.ಎಂ.ವಿ. | ... ಸದಸ್ಯರು |
| 6. ಶ್ರೀ.ಕುಮಾರ್ | ... ಸದಸ್ಯರು |
| 7. ಡಾ.ಪಿ.ಎಸ್.ಸುರೇಶ್ | ... ಸದಸ್ಯರು |
| 8. ಡಾ.ವಿ.ಶಿವಪ್ರಸಾದ್ | ... ಸದಸ್ಯರು |
| 9. ಡಾ.ಎಂ.ಪ್ರೀತಿ | ... ಸದಸ್ಯರು |
| 10. ಡಾ.ರಾಜಗೋಪಾಲ್ | ... ಸದಸ್ಯರು |
| 11. ಪ್ರೊ. ಎನ್.ಎಂ.ತಳವಾರ್ | ... ಸದಸ್ಯರು |
| 12. ಪ್ರೊ. ಹೆಚ್.ಟಿ.ಬಸವರಾಜಪ್ಪ | ... ಸದಸ್ಯರು |
| 13. ಪ್ರೊ.ಎಸ್.ಎಲ್.ಬೆಳಗಲಿ | ... ಸದಸ್ಯರು |
| 14. ಪ್ರೊ.ಬಿ.ಪಿ.ಮಹೇಶ್‌ಚಂದ್ರ ಗುರು | ... ಸದಸ್ಯರು |
| 15. ಪ್ರೊ.ಬಿ.ಕೆ.ತುಳಸೀಮಾಲ | ... ಸದಸ್ಯರು |
| 16. ಪ್ರೊ.ಆಯಿಷಾ ಎಂ ಶೆರೀಫ್ | ... ಸದಸ್ಯರು |
| 17. ಡಾ. ಎಸ್.ಮದಿಅಳಗನ್ | ... ಸದಸ್ಯರು |
| 18. ಶ್ರೀ.ನಾಗೇಶ್ ಕರಿಯಪ್ಪ | ... ಸದಸ್ಯರು |
| 19. ಶ್ರೀ ರಘು ಸಿ ಎಸ್ | ... ಸದಸ್ಯರು |
| 20. ಶ್ರೀ ಬೆಳವಾಡಿ ಪ್ರಭಾಕರ್ | ... ಸದಸ್ಯರು |
| 21. ಡಾ.ಆರ್.ಟಿ.ಡಿ.ರಮೇಶ್‌ಗಾಂಧಿ, ಗ್ರಂಥಪಾಲಕರು | ... ಸದಸ್ಯರು |
| 22. ಡಾ.ಎಸ್.ಶ್ರೀಕಂಠಸ್ವಾಮಿ, ನಿರ್ದೇಶಕರು, ಕಾಲೇಜು ಅಭಿವೃದ್ಧಿ ಮಂಡಳಿ | ... ಸದಸ್ಯರು |
| 23. ಪ್ರೊ.ಯಶವಂತ ಡೋಂಗ್ರೆ, ನಿರ್ದೇಶಕರು, ಪಿ.ಎಂ.ಇ.ಬಿ. | ... ಸದಸ್ಯರು |
| 24. ಡಾ. ಕೆ.ಬಿ. ಪ್ರವೀಣ್, ನಿರ್ದೇಶಕರು, ವಿದ್ಯಾರ್ಥಿ ಕ್ಷೇಮ್ಮಪಾಲನಾ ನಿರ್ದೇಶನಾಲಯ | ... ಸದಸ್ಯರು |
| 25. ಡಾ.ಪಿ.ಕೃಷ್ಣಯ್ಯ, ನಿರ್ದೇಶಕರು, ದೈಹಿಕ ಶಿಕ್ಷಣ ವಿಭಾಗ | ... ಸದಸ್ಯರು |
| 26. ಪ್ರೊ.ಜೆ.ಸೋಮಶೇಖರ್, ಕುಲಸಚಿವ(ಪರೀಕ್ಷಾಂಗ) | ... ಸದಸ್ಯರು |
| 27. ಪ್ರೊ.ಬಿ.ಮಹದೇವಪ್ಪ, ಹಣಕಾಸು ಅಧಿಕಾರಿಗಳು | ... ಸದಸ್ಯರು |
| 28. ಪ್ರೊ. ಆರ್. ರಾಜಣ್ಣ, ಕುಲಸಚಿವರು | ...ಸದಸ್ಯರು ಕಾರ್ಯದರ್ಶಿ |

<u>ವಿಶೇಷ ಆಹ್ವಾನಿತರು</u>

29. ಪ್ರೊ. ಮಹದೇವ
30. ಪ್ರೊ.ಸಿ.ಬಸವರಾಜು
31. ಪ್ರೊ. ಶ್ರೀಧರ್ ಎಂ.ಎ

ಸಭೆಗೆ ಹಾಜರಾಗದವರು

1. ನಿರ್ದೇಶಕರು, ತಾಂತ್ರಿಕ ಶಿಕ್ಷಣ
2. ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ
3. ಶ್ರೀಮತಿ ಎಂ.ಎನ್.ಪೊನ್ನಮ್ಮ

ಮೊದಲಿಗೆ, ಮಾನ್ಯ ಕುಲಸಚಿವರು ಮಾತನಾಡಿ ಇತ್ತೀಚೆಗೆ ದೈವಾಧೀನರಾದ ಶ್ರೇಷ್ಠ ಹಿರಿಯ ಮುತ್ಸದ್ದಿ, ಭಾರತ ರತ್ನ, ಮಾಜಿ ಪ್ರಧಾನ ಮಂತ್ರಿಗಳಾದ ಶ್ರೀ ಅಟಲ್ ಬಿಹಾರಿ ವಾಜಪೇಯಿ ಹಾಗೂ ಹಿರಿಯ ಸಾಹಿತಿ, ಚಿಂತಕರು ಹಾಗೂ ಮೈಸೂರು ವಿಶ್ವವಿದ್ಯಾನಿಲಯದ ಶಿಕ್ಷಣ ಮಂಡಳಿಯ ಮಾಜಿ ಸದಸ್ಯರಾದ ಪ್ರೊ. ಶಿವರಾಮು ಕಾಡನಕುಪ್ಪೆ ಅವರುಗಳ ನಿಧನಕ್ಕೆ ಸಂತಾಪ ಸೂಚಿಸಿ 2 ನಿಮಿಷ ಮೌನವನ್ನು ಆಚರಿಸಲಾಯಿತ್ತು.

ಮಾನ್ಯ ಕುಲಪತಿಗಳು, ಶಿಕ್ಷಣ ಮಂಡಳಿಯ ಎಲ್ಲಾ ಸದಸ್ಯರುಗಳನ್ನು ಹಾಗೂ ಪತ್ರಿಕಾ ಮಾಧ್ಯಮದವರನ್ನು ಸಭೆಗೆ ಹೃತ್ಪೂರ್ವಕವಾಗಿ ಸ್ವಾಗತಿಸಿದರು.

ನಂತರ ಶಿಕ್ಷಣ ಮಂಡಳಿಗೆ ಹೊಸದಾಗಿ ನಾಮನಿರ್ದೇಶನಗೊಂಡಿರುವ ಈ ಕೆಳಕಂಡ ಸದಸ್ಯರುಗಳನ್ನು ಸಭೆಗೆ ಪರಿಚಯಿಸಿ, ಅವರನ್ನೂ ಸಹ ಸಭೆಗೆ ಸ್ವಾಗತಿಸಲಾಯಿತು.

1. ಪ್ರೊ. ಎನ್.ಎಂ.ತಳವಾರ್, ನಿರ್ದೇಶಕರು, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು.
2. ಪ್ರೊ.ಹೆಚ್.ಟಿ.ಬಸವರಾಜಪ್ಪ, ಭೂವಿಜ್ಞಾನ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು.
3. ಡಾ.ಪಿ.ಎಸ್.ಸುರೇಶ್, ಪ್ರಾಂಶುಪಾಲರು, ಶಾರದಾ ವಿಲಾಸ ಶಿಕ್ಷಣ ಮಹಾವಿದ್ಯಾಲಯ, ಮೈಸೂರು
4. ಡಾ.ವಿ.ಶಿವಪ್ರಸಾದ್, ನಿರ್ದೇಶಕರು, ಸೆಂಟ್ರಲ್ ಸಿರಿಕಲ್ಚರ್ ರೀಸರ್ಚ್ & ಟ್ರೈನಿಂಗ್ ಇನ್ಸ್‌ಟಿಟ್ಯೂಟ್, ಮೈಸೂರು.
5. ಡಾ.ಎಂ.ಪ್ರೀತಿ, ಪ್ರಾಂಶುಪಾಲರು, ಟಿ.ಟಿ.ಎಲ್ ಕಾಲೇಜ್ ಆಫ್ ಬ್ಯೂಸಿನೆಸ್ ಮ್ಯಾನೇಜ್‌ಮೆಂಟ್, ಮೈಸೂರು.

ಇದುವರೆವಿಗೂ ಶಿಕ್ಷಣ ಮಂಡಳಿಯ ಸದಸ್ಯರಾಗಿ ಸೇವೆ ಸಲ್ಲಿಸಿ ನಿರ್ಗಮಿಸಿರುವ ಈ ಕೆಳಕಂಡ ಸದಸ್ಯರುಗಳ ಸೇವೆಯನ್ನು ಸ್ಮರಿಸಿ ದಾಖಲಿಸಲಾಯಿತು.

1. ಪ್ರೊ.ಭಾರತಿ ಪಿ. ಸಾಲಿಮಠ್, ಜೀವತಂತ್ರಜ್ಞಾನ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು
2. ಪ್ರೊ.ಹೆಚ್.ಎಸ್.ಯತಿರಾಜನ್, ರಸಾಯನಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು.
3. ಶ್ರೀ ಟಿ.ರಾಮಕೃಷ್ಣ, ಪ್ರಾಂಶುಪಾಲರು, ಎ.ಡಿ.ಬಿಳಿಗೌಡ, ಪ್ರಥಮ ದರ್ಜೆ ಕಾಲೇಜು, ಕೊಪ್ಪ.
4. ಶ್ರೀ ಕೆ.ಟಿ. ಅಪ್ಪಾಜಪ್ಪಾ, ಪ್ರಾಂಶುಪಾಲರು, ಬಿ.ಹೆಚ್.ಮಂಗೇಗೌಡ ಪ್ರಥಮ ದರ್ಜೆ ಕಾಲೇಜು, ಬೆಸಗರಹಳ್ಳಿ.
5. ಶ್ರೀ ಬಿ.ಇ.ಜಗದೀಶ, ಪ್ರಾಂಶುಪಾಲರು, ಬಿ.ಈ.ಜಿ. ಪ್ರಥಮ ದರ್ಜೆ ಕಾಲೇಜು, ಹಾಸನ.

ನಂತರ ಕಾರ್ಯಸೂಚಿಯನ್ನು ಕೈಗೆತ್ತಿಕೊಳ್ಳಲಾಯಿತ್ತು.

**I.1** ದಿನಾಂಕ 19-06-2018ರಂದು ನಡೆದ ಶಿಕ್ಷಣ ಮಂಡಳಿಯ ಮೂರನೇ ಸಾಮಾನ್ಯ ಸಭೆಯ ನಡವಳಿಗಳನ್ನು ದೃಢೀಕರಿಸುವ ಬಗ್ಗೆ.

ತೀರ್ಮಾನ: ದೃಢೀಕರಿಸಲಾಯಿತು

**II.1** ಪ್ರೊ. ಸೆಲ್ವಿದಾಸ್ ನಗದು ಬಹುಮಾನ ದತ್ತಿ ಸ್ಥಾಪನೆ ಮಾಡುವ ಬಗ್ಗೆ.

**ತೀರ್ಮಾನ: ಅನುಮೋದಿಸಲಾಯಿತು**

**II.2 "International Relations"** ವಿಷಯವನ್ನು ಪಿ.ಹೆಚ್.ಡಿ ಪ್ರವೇಶ ಪರೀಕ್ಷೆಯಲ್ಲಿ ಸೇರ್ಪಡೆಗೊಳಿಸುವ ಬಗ್ಗೆ.

**ತೀರ್ಮಾನ: ಅನುಮೋದಿಸಲಾಯಿತು**

**II.3** ವಿಶ್ವವಿದ್ಯಾನಿಲಯದ 2017-18ನೇ ಸಾಲಿನ ವಾರ್ಷಿಕ ವರದಿಯನ್ನು ಅನುಮೋದಿಸುವ ಬಗ್ಗೆ.

**ತೀರ್ಮಾನ: ಅನುಮೋದಿಸಲಾಯಿತು**

**II.4** ಬಿ.ಜಿ.ಎಸ್.ಪ್ರಥಮ ದರ್ಜೆ ಕಾಲೇಜು, ಬಿ.ಜಿ.ನಗರ, ನಾಗಮಂಗಲ ತಾಲ್ಲೂಕು ಮಂಡ್ಯ ಜಿಲ್ಲೆ ಈ ಪ್ರಥಮ ದರ್ಜೆ ಕಾಲೇಜನ್ನು 2018-19ನೇ ಶೈಕ್ಷಣಿಕ ಸಾಲಿನಿಂದ ಆದಿಚುಂಚನಗಿರಿ ವಿಶ್ವವಿದ್ಯಾನಿಲಯದ ಸುಪರ್ದಿಗೆ ಹಸ್ತಾಂತರ ಮಾಡುವುದರ ಬಗ್ಗೆ.

**ತೀರ್ಮಾನ: ಅನುಮೋದಿಸಲಾಯಿತು.**

**II.5** ಸಂಯೋಜಿತ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಎಂ.ಕಾಂ. ಸ್ನಾತಕೋತ್ತರ ಕೋರ್ಸಿಗೆ 2018-19ನೇ ಸಾಲಿನಿಂದ ಅನ್ವಯವಾಗುವಂತೆ ಹೆಚ್ಚುವರಿ ಪ್ರವೇಶಾತಿ ನೀಡುವ ಬಗ್ಗೆ.

**ತೀರ್ಮಾನ: ಅನುಮೋದಿಸಲಾಯಿತು**

**II.6** B.Sc. (Honors) in Agricultural Science and Technology/Horticultural Science and Technology ಪದವಿ ಕೋರ್ಸ್‌ಗೆ 2018-19ನೇ ಸಾಲಿಗೆ ಹೆಚ್ಚುವರಿಯಾಗಿ ನೀಡಲಾದ 60 ವಿದ್ಯಾರ್ಥಿಗಳ ಪ್ರವೇಶದ ಬಗ್ಗೆ ಅನುಸಮರ್ಥನೆಗಾಗಿ.

ಕುಲಸಚಿವರು ಮಾತನಾಡಿ B.Sc. (Honors) in Agricultural Science and Technology/Horticultural Science and Technology ಪದವಿ ಕೋರ್ಸ್‌ಗೆ 2018-19ನೇ ಸಾಲಿಗೆ ಹೆಚ್ಚುವರಿಯಾಗಿ ನೀಡಲಾದ 60 ವಿದ್ಯಾರ್ಥಿಗಳನ್ನು ಪ್ರವೇಶಾತಿ ಮಾಡಿಕೊಳ್ಳಲು ಸಂಸ್ಥೆಯಿಂದ ಪತ್ರ ಬಂದಿದೆ ಈ ವಿಷಯವನ್ನು ಸಿಂಡಿಕೇಟ್ ಸಭೆಯು ಒಪ್ಪಿರುವುದರಿಂದ ವಿದ್ಯಾ ವಿಷಯಕ ಪರಿಷತ್ ಸಭೆಯ ಅನುಸಮರ್ಥನೆಗಾಗಿ ಮಂಡಿಸಲಾಗಿದೆ ಎಂದು ತಿಳಿಸಿದರು.

ವಿಧಾನ ಪರಿಷತ್ ಮಾನ್ಯ ಸದಸ್ಯರಾದ ಶ್ರೀ ಅಪ್ಪಾಜಿಗೌಡರು ಇದಕ್ಕೆ ಪ್ರತಿಕ್ರಿಯಿಸಿ, ಮಾತನಾಡುತ್ತಾ ಮಂಡ್ಯ ಜಿಲ್ಲೆಯ **ಸಂಪೂರ್ಣ ಇಂಟರ್ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಅಗ್ರಿ ಸೈನ್ಸ್ ಅಂಡ್ ಹಾರ್ಟಿಕಲ್ಚರಲ್ ಟೆಕ್ನಾಲಜಿಯಲ್ಲಿ ಕೃಷಿ ವಿಜ್ಞಾನ ಮತ್ತು ತೋಟಗಾರಿಕೆ ವಿಜ್ಞಾನ** ವಿಷಯದ ಬಿ.ಎಸ್‌ಸಿ ಪದವಿ ಕೋರ್ಸಿಗೆ 2018-19ನೇ ಸಾಲಿಗೆ ಹೆಚ್ಚುವರಿ 60 ವಿದ್ಯಾರ್ಥಿಗಳ ಪ್ರವೇಶಾತಿ ನೀಡಿರುವುದು ಸರಿಯಿಲ್ಲವೆಂದು ತಿಳಿಸಿದರು ಹಾಗೂ ಈ ಕೋರ್ಸು ಪ್ರಾರಂಭವಾಗಿ ಈಗಾಗಲೇ ನಾಲ್ಕು ವರ್ಷಗಳಾಗಿದ್ದು ಇನ್ನೂ ಒಂದು ಬ್ಯಾಚ್ ಸಹ ಹೊರಬಂದಿಲ್ಲವಾದ್ದರಿಂದ ಒಂದು ಬ್ಯಾಚ್ ಹೊರ ಬಂದ ನಂತರ ಹೆಚ್ಚುವರಿಯಾಗಿ ವಿದ್ಯಾರ್ಥಿಗಳನ್ನು ಪ್ರವೇಶಾತಿ ಮಾಡಿಕೊಳ್ಳಲು ಅನುಮತಿ ನೀಡಬಹುದು ಹಾಗೂ ಈ ಸಂಸ್ಥೆಯಲ್ಲಿ ಮೂಲಭೂತ ಸೌಕರ್ಯ, ಖಾಯಂ ಬೋಧನಾ ವರ್ಗ, ಸಂಶೋಧನಾ

ಸೌಲಭ್ಯಕ್ಕಾಗಿ ವಿಶಾಲವಾದ ಪ್ರದೇಶವಿದೆಯೇ? ಹಾಗೂ ಶುಲ್ಕ ನಿಗದಿಪಡಿಸುವುದು, ಪರೀಕ್ಷೆ ನಡೆಸುವುದು, ಪ್ರಶ್ನೆ ಪತ್ರಿಕೆಗಳನ್ನು ತಯಾರಿಸುವವರು ಯಾರು? ಮತ್ತು ಪರೀಕ್ಷಾ ಮಂಡಳಿಯ ಅಧ್ಯಕ್ಷರು ಯಾರಾಗಿರುತ್ತಾರೆ ಎಂದು ಪ್ರಶ್ನಿಸಿದರು.

ಪ್ರೊ. ಯಶವಂತ ಡೋಂಗ್ರೆಯವರು ಮಾತನಾಡಿ ಸಂಪೂರ್ಣ ಇಂಟರ್ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಅಗ್ರಿ ಸೈನ್ಸ್ ಅಂಡ್ ಹಾರ್ಟಿಕಲ್ಚರಲ್ ಟೆಕ್ನಾಲಜಿಯಲ್ಲಿ ಕೃಷಿ ವಿಜ್ಞಾನ ಮತ್ತು ತೋಟಗಾರಿಕೆ ವಿಜ್ಞಾನ ವಿಷಯದ ಬಿ.ಎಸ್ಸಿ, ಪದವಿ ಕೋರ್ಸು ಪ್ರಾರಂಭವಾಗಿ 4 ವರ್ಷಗಳು ಪೂರ್ಣಗೊಂಡಿರುತ್ತದೆ 60 ವಿದ್ಯಾರ್ಥಿಗಳನ್ನು ಹೆಚ್ಚುವರಿಯಾಗಿ ಪ್ರವೇಶಾತಿ ಮಾಡಿಕೊಳ್ಳಲು ಅನುಮತಿ ಕೋರಿ ಪತ್ರ ಬಂದಿದ್ದರಿಂದ ಈ ವಿಷಯವನ್ನು ಸಿಂಡಿಕೇಟ್ ಸಭೆಯ ಮುಂದೆ ಚರ್ಚಿಸಿ ಅನುಮೋದಿಸಿದೆ ಸದರಿ ವಿಷಯವನ್ನು ಶಿಕ್ಷಣ ಮಂಡಳಿ ಸಭೆಯ ಅನುಮೋದನೆಗಾಗಿ ತರಲಾಗಿದೆ. ಈ ಸಂಸ್ಥೆಯೂ 75 ಎಕರೆ ವಿಶಾಲವಾದ ಪ್ರದೇಶವನ್ನು ಹೊಂದಿದೆ. ಉತ್ತಮವಾದ ಬೋಧನ ಸೌಲಭ್ಯವಿದೆ, ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕರು ಪರೀಕ್ಷಾ ಮಂಡಳಿಯ ಅಧ್ಯಕ್ಷರಾಗಿರುತ್ತಾರೆ, ವಿಶ್ವವಿದ್ಯಾನಿಲಯದ ವತಿಯಿಂದಲೇ ಶುಲ್ಕ ನಿಗಧಿ, ಪ್ರಶ್ನೆ ಪತ್ರಿಕೆಗಳನ್ನು ಸಿದ್ಧಪಡಿಸುವುದು, ಪರೀಕ್ಷೆಯನ್ನು ನಡೆಸಿ ಫಲಿತಾಂಶ ಪ್ರಕಟಿಸುವವರೆಗೆ ವಿಶ್ವವಿದ್ಯಾನಿಲಯದ ವತಿಯಿಂದಲೇ ಈ ಎಲ್ಲಾ ಕಾರ್ಯಗಳನ್ನು ನಿರ್ವಹಿಸುತ್ತದೆ ಎಂದು ತಿಳಿಸಿದರು.

ಪ್ರೊ. ಮಹೇಶ್‌ಚಂದ್ರ ಗುರು, ಪ್ರೊ. ಸಿ.ಬಸವರಾಜು ಹಾಗೂ ನಾಗೇಶ ಕರಿಯಪ್ಪ ಇವರುಗಳು ಮಾತನಾಡಿ ಖಾಸಗಿ ಸಂಸ್ಥೆಗಳು ತಮಗಿಷ್ಟ ಬಂದಂತೆ ಶುಲ್ಕವನ್ನು ವಸೂಲಿ ಮಾಡಿ ಹಣದ ದಂಧೆ ನಡೆಸುತ್ತಿರುವುದರಿಂದ ವಿಶೇಷ ಕೋರ್ಸುಗಳಿಗೆ ಅವಕಾಶ ಕೊಡಬಾರದು ಇದರಿಂದ ಕೃಷಿ ವಿಶ್ವವಿದ್ಯಾನಿಲಯಗಳಿಗೆ ತೊಂದರೆಯಾಗುವುದರಿಂದ ಕಾನೂನಿನ ಪ್ರಕಾರ ತಪ್ಪಾಗುವುದರಿಂದ ವಿಶ್ವವಿದ್ಯಾನಿಲಯಕ್ಕೆ ತೊಂದರೆಯಾಗುತ್ತದೆ. ಆದ್ದರಿಂದ ಹೆಚ್ಚುವರಿಯಾಗಿ 60 ವಿದ್ಯಾರ್ಥಿಗಳಿಗೆ ಪ್ರವೇಶಾತಿ ನೀಡದೆ ಮುಂದಿನ ಶೈಕ್ಷಣಿಕ ವರ್ಷದಿಂದ ಈ ಪ್ರವೇಶಾತಿಯನ್ನು ರದ್ದುಗೊಳಿಸಬೇಕೆಂದು ಒತ್ತಾಯಿಸಿದರು.

ತೀರ್ಮಾನ: **ಮಾನ್ಯ ಕುಲಪತಿಗಳು ಶಿಕ್ಷಣ ಮಂಡಳಿಯ ಸದಸ್ಯರ ಒಪ್ಪಿಗೆ ಮೇರೆಗೆ, ಹೆಚ್ಚುವರಿಯಾಗಿ ನೀಡಿರುವ 60 ಸಂಖ್ಯಾಮಿತಿಯನ್ನು ಮುಂದಿನ ಶೈಕ್ಷಣಿಕ ವರ್ಷದಿಂದ (2019-20) ರದ್ದುಗೊಳಿಸಲಾಗುವುದು ಎಂದು ತಿಳಿಸಿದರು. ಈ ವಿಷಯವನ್ನು ಸಭೆಯು ಒಪ್ಪಿ ಅನುಮೋದಿಸಿತು.**

**II.7** 06 ವರ್ಷಗಳ ಎಂ.ಎಸ್ಸಿ.ಇಡಿ ಪದವಿಗೆ ಹೊರಡಿಸುವ ಆರ್ಡಿನೆನ್ಸ್‌ನಲ್ಲಿ ಯಾವ ವರ್ಷದಿಂದ ಪದವಿಯನ್ನು ನೀಡಬೇಕು ಎಂಬುದನ್ನು ಸೇರ್ಪಡೆಗೊಳಿಸುವ ಬಗ್ಗೆ.

**ತೀರ್ಮಾನ: 2012-13ರ ಶೈಕ್ಷಣಿಕ ಸಾಲಿನಿಂದ ಬಿ.ಎಸ್ಸಿ. ಇಡಿ, 2014-15ನೇ ಶೈಕ್ಷಣಿಕ ಸಾಲಿನಿಂದ ಎಂ.ಎಸ್ಸಿ.ಇಡಿ ಪದವಿಯನ್ನು ನೀಡುವಂತೆ ಆರ್ಡಿನೆನ್ಸ್‌ನಲ್ಲಿ ಸೇರ್ಪಡೆಗೊಳಿಸಲು ಒಪ್ಪಿ ಅನುಮೋದಿಸಲಾಯಿತು**

**II.8** ಪ್ರೊ.ರವೀಶ ಕೊಟೇಶ್ವರ್ ಆನಂದ್‌ರಾವ್ ಚಿನ್ನದ ಪದಕ ದತ್ತಿ ಸ್ಥಾಪನೆ ಮಾಡುವ ಬಗ್ಗೆ (M.Sc. In Botany)

**ತೀರ್ಮಾನ: ಅನುಮೋದಿಸಲಾಯಿತು**

**II.9** ಪ್ರೊ.ರವೀಶ ಕೊಟೇಶ್ವರ್ ಆನಂದ್‌ರಾವ್ ಚಿನ್ನದ ಪದಕ ದತ್ತಿ ಸ್ಥಾಪನೆ ಮಾಡುವ ಬಗ್ಗೆ (M.Sc. In Microbiology)

**ತೀರ್ಮಾನ: ಅನುಮೋದಿಸಲಾಯಿತು**

**II.10** BBA (Tourism and Hospitality) ಪರಿಷ್ಕೃತ ಪಠ್ಯಕ್ರಮದ ಅನುಮೋದನೆ ಬಗ್ಗೆ.

**ತೀರ್ಮಾನ: ಸಿ.ಬಿಸಿಎಸ್ ವಿನಿಯಮಸಾರ ಇತರ ವಿಷಯಗಳ ಪಠ್ಯಕ್ರಮಗಳನ್ನು ಸರಿಪಡಿಸಿ, ಮಾನ್ಯ ಕುಲಪತಿಗಳ ಅನುಮೋದನೆ ಪಡೆದು ಮುಂದಿನ ಕ್ರಮ ವಹಿಸುವಂತೆ ತೀರ್ಮಾನಿಸಲಾಯಿತು**

**II.11** UG-CBCS ವಿನಿಯಮಾವಳಿಗೆ ಸರ್ಕಾರದ ಅನುಮೋದನೆ ಪಡೆಯುವ ಬಗ್ಗೆ.

**ತೀರ್ಮಾನ: ಅಗತ್ಯ ತಿದ್ದುಪಡಿಗಳೇನಾದರು ಇದ್ದಲ್ಲಿ ಸೇರ್ಪಡಿಸಲು ಸಭೆಯು ಒಪ್ಪಿ ಅನುಮೋದಿಸಲಾಯಿತು.**

**II.12** ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಶ್ರೀ ಎನ್.ರಾಚಯ್ಯ ಅಧ್ಯಯನ ಪೀಠಕ್ಕೆ ಸಂಬಂಧಿಸಿದ ಕರಡು ಅಧಿನಿಯಮ ಅನುಮೋದಿಸುವ ಬಗ್ಗೆ.

**ತೀರ್ಮಾನ: ಅನುಮೋದಿಸಲಾಯಿತು.**

**II.13** ಮೈಸೂರು ವಿಶ್ವವಿದ್ಯಾನಿಲಯದ ವಾರ್ಷಿಕ ವರದಿಯನ್ನು ಸಾಫ್ಟ್ ಕಾಫಿಯನ್ನು ಕಳುಹಿಸಲು ಅನುಮತಿಯನ್ನು ಕೋರುವ ಬಗ್ಗೆ.

**ತೀರ್ಮಾನ: ಮೈಸೂರು ವಿಶ್ವವಿದ್ಯಾನಿಲಯದ ವಾರ್ಷಿಕ ವರದಿಯ ಸಾಫ್ಟ್ ಕಾಪಿಯನ್ನು (ಸಿ.ಡಿ ರೂಪದಲ್ಲಿ) ಕನ್ನಡ ಮತ್ತು ಆಂಗ್ಲ ಭಾಷೆಯಲ್ಲಿ ಸರ್ಕಾರಕ್ಕೆ ಹಾಗೂ ವಿಶ್ವವಿದ್ಯಾನಿಲಯದ ಅಂಗ/ಮಾನ್ಯತೆ ಪಡೆದ ಕಾಲೇಜುಗಳಿಗೆ ಮಾಹಿತಿಗಾಗಿ ವಾರ್ಷಿಕ ವರದಿಯನ್ನು ಕಳುಹಿಸಲು ಶಿಕ್ಷಣ ಮಂಡಳಿ ಸಭೆಯೂ ಒಪ್ಪಿ ಅನುಮೋದಿಸಿತು.**

**II.14** ಮೈಸೂರು ವಿಶ್ವವಿದ್ಯಾನಿಲಯದ ಸಂಶೋಧನಾ ಕೇಂದ್ರಗಳಿಗೆ ಮಾನ್ಯತೆ/ನವೀಕರಣ ಮಾನ್ಯತೆ ನೀಡುವ ಕುರಿತು ಮಾರ್ಗಸೂಚಿಯಲ್ಲಿ ಕೆಲವು ಮಾರ್ಪಾಡುಗಳನ್ನು ಮಾಡಲು ರಚಿತವಾಗಿರುವ ಸಮಿತಿಯ ನಡಾವಳಿಯ ಹಾಗೂ MoU ಕರಡು ಅನುಮೋದನೆಗೆ.

**ತೀರ್ಮಾನ: ಅನುಮೋದಿಸಲಾಯಿತು.**

**II.15** ಪಿ.ಹೆಚ್.ಡಿ ನಿಯಮಾವಳಿ 2017ರ ತಿದ್ದುಪಡಿ ಬಗ್ಗೆ.

**ತೀರ್ಮಾನ: ಸಂಶೋಧನಾ ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ಪಿಹೆಚ್.ಡಿ ನಿಯಮಾವಳಿ–2017ಕ್ಕೆ ಸಂಬಂಧಿಸಿದಂತೆ ಪ್ರಮುಖ ಬದಲಾವಣೆಗಳನ್ನು ಮಾಡಲಾಗಿದೆ. ಪ್ರೊ. ಎ.ಬಾಲಸುಬ್ರಮಣ್ಯಂ ಅವರ ಅಧ್ಯಕ್ಷತೆಯಲ್ಲಿ ಕೆಲವು ತಿದ್ದುಪಡಿಗಳನ್ನು ಮಾಡಿ ಶಿಕ್ಷಣ ಮಂಡಳಿ ಸಭೆಯ ತೀರ್ಮಾನಕ್ಕಾಗಿ ಮಂಡಿಸಲಾಗಿದೆ ಎಂದು ಪರೀಕ್ಷಾಂಗ ಕುಲಸಚಿವರಾದ ಪ್ರೊ. ಜೆ.ಸೋಮಶೇಖರ್‌ರವರು ತಿಳಿಸಿದರು.**

**Additional Amendment ಕಂಡಿಕೆ: 5.9ರಲ್ಲಿ "undergo an interview before the probable guide(s) and" ಈ ವಾಕ್ಯವನ್ನು ಕೈಬಿಡುವಂತೆ ತೀರ್ಮಾನಿಸಲಾಯಿತು ಹಾಗೂ ನಿಯಮಾವಳಿಯಲ್ಲಿನ ಮಾರ್ಪಾಡುಗಳನ್ನು ಸಭೆಯು ಸರ್ವಾನುಮತದಿಂದ ಒಪ್ಪಿ ಅನುಮೋದಿಸಿತು.**

**II.16** ಪ್ರೊ.ಸಣ್ಣಯ್ಯ ಅನಂದ ಚಿನ್ನದ ಪದಕ ದತ್ತಿ ಸ್ಥಾಪನೆ ಮಾಡುವ ಬಗ್ಗೆ.

ತೀರ್ಮಾನ: ಅನುಮೋದಿಸಲಾಯಿತು.

**ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು:**

1. ಪ್ರೊ. ಮಹದೇವರವರು ಮಾತನಾಡುತ್ತಾ ಸಂತ ಫಿಲೋಮಿನಾ ಕಾಲೇಜಿನಲ್ಲಿ 2015–16ನೇ ಶೈಕ್ಷಣಿಕ ಸಾಲಿನಲ್ಲಿ ಅರ್ಹತೆ ಇಲ್ಲದಿರುವ ಓರ್ವ ವಿದ್ಯಾರ್ಥಿಗೆ ಮತ್ತು 2016–17ನೇ ಸಾಲಿನಲ್ಲಿಯೂ ಸಹ ಇದೇ ರೀತಿ ಅರ್ಹತೆ ಇಲ್ಲದಿರುವ 13 ಮಂದಿ ಸ್ನಾತಕೋತ್ತರ ಇಂಗ್ಲಿಷ್ ವಿದ್ಯಾರ್ಥಿಗಳನ್ನು ಅಕ್ರಮವಾಗಿ ಪ್ರವೇಶಾತಿ ಮಾಡಿಕೊಂಡಿರುತ್ತಾರೆ ಇದು ಗುರುತರವಾದ ಅಪರಾದವಾಗಿದೆ ಹಾಗೂ ತಮ್ಮದೇ ಆದ ಪ್ರವೇಶಾತಿ ನಿಯಮವನ್ನು ಮಾಡಿಕೊಂಡು ವಿಶ್ವವಿದ್ಯಾನಿಲಯದ ಮಾರ್ಗಸೂಚಿ/ನಿಯಮವನ್ನು ಉಲ್ಲಂಘನೆ ಮಾಡಿ ವಿದ್ಯಾರ್ಥಿಗಳಿಗೆ ಗ್ರೇಸ್ ಮಾರ್ಕ್ಸ್ ನೀಡಿದ್ದಾರೆ ಇದು ವಿಶ್ವವಿದ್ಯಾನಿಲಯದ ಮಾರ್ಗಸೂಚಿಗೆ ವಿರುದ್ದವಾಗಿರುವುದರಿಂದ ಈ ಕಾಲೇಜಿನವರ ಮೇಲೆ ಸೂಕ್ತ ಕ್ರಮ ಜರುಗಿಸುವಂತೆ ಕೋರಿದ್ದರು.

2. ಪ್ರೊ.ಸಿ.ಬಸವರಾಜುರವರು ಮಾತನಾಡುತ್ತಾ ಸಂತ ಫಿಲೋಮಿನಾ ಕಾಲೇಜಿನ ಸ್ನಾತಕೋತ್ತರ ಇಂಗ್ಲಿಷ್ 13 ವಿದ್ಯಾರ್ಥಿಗಳಿಗೆ ವಿದ್ಯಾ ವಿಷಯಕ ಪರಿಷತ್ ನಿರ್ಣಯದನ್ವಯ ಮಾನವೀಯತೆ ಆಧಾರದ ಮೇಲೆ ಅನುಮತಿ ನೀಡಿದ್ದರಿಂದ ಈಗಾಗಲೇ ಸದರಿ ವಿದ್ಯಾರ್ಥಿಗಳು ತಮ್ಮ ಶಿಕ್ಷಣವನ್ನು ಮುಗಿಸಿದ್ದಾರೆ. ಆದರೂ ಸಹ ಈ ಸಂಸ್ಥೆಯು ಸತತವಾಗಿ ವಿಶ್ವವಿದ್ಯಾನಿಲಯದ ಮಾರ್ಗಸೂಚಿ/ನಿಯಮವನ್ನು ಉಲ್ಲಂಘಿಸಿ ಪ್ರಸ್ತುತ ಈ ಕೆಲಸವನ್ನು ಮುಂದುವರಿಸಿಕೊಂಡು ಬರುತ್ತಿರುವುದರಿಂದ ಸಂಬಂಧಿಸಿದ ಸಂಸ್ಥೆಯವರ ಮೇಲೆ ಕ್ರಮ ಜರುಗಿಸಬೇಕು ಹಾಗೂ ಪ್ರಸ್ತುತ ಸಾಲಿನಿಂದ ಸ್ನಾತಕೋತ್ತರ ಕೋರ್ಸ್‌ಗೆ ಸಂಯೋಜನೆಯನ್ನು ಸ್ಥಗಿತಗೊಳಿಸಬೇಕೆಂದು ತಿಳಿಸಿದರು.

3. ಮಾನ್ಯ ಕುಲಪತಿಯವರು ಮಾತನಾಡಿ ಸಂತ ಫಿಲೋಮಿನಾ ಸ್ನಾತಕೋತ್ತರ ಕಾಲೇಜಿಗೆ ಈಗಾಗಲೇ ಎಚ್ಚರಿಕೆ ನೋಟಿಸ್ ನೀಡಲಾಗಿದೆ ಎಂದು ತಿಳಿಸಿದರು.

ಕೊನೆಯಲ್ಲಿ ಮಾನ್ಯ ಕುಲಪತಿಗಳು ಸಭೆಯಲ್ಲಿ ಸಕ್ರಿಯವಾಗಿ ಪಾಲೊಂಡು ಅತ್ಯಮೂಲ್ಯ ಸಲಹೆ ಸೂಚನೆ ಸಹಕಾರಗಳನ್ನು ನೀಡಿದ ಎಲ್ಲರಿಗೂ ವಂದಿಸಿ ಸಭೆಯನ್ನು ಮುಕ್ತಾಯಗೊಳಿಸಿದರು.

ಸಹಿ/–
ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿಗಳು

ಸಹಿ/–
ಕುಲಪತಿಗಳು ಹಾಗೂ ಅಧ್ಯಕ್ಷರು